ಚೆನ್ನಕೇಶವ ದೇವಸ್ಥಾನ ಇದೆ, ಅಲ್ಲೊಂದು ಯಾತ್ರಿ ನಿವಾಸ ಬೇಕು ಎಂದು ಹೇಳುವಂತಹ ಮಾತನ್ನು ಅವರು ಉಲ್ಲೇಖ ಮಾಡಿದ್ದಾರೆ. ಸುಮಾರು 12 ಎಕರೆ ಜಾಗ ಇರುವಂತಹದ್ದು ನಿಜ ಇದೆ, ಆದರೆ ಅದು Archeological Departmentನ ವ್ಯಾಪ್ತಿಯಲ್ಲಿ ಬರುವಂತಹ ಹಿನ್ನೆಲೆಯಲ್ಲಿ ಅವರ ಚೌಕಟ್ಟುಗಳು 300 ಮೀಟರ್ ವ್ಯಾಪ್ತಿಯಲ್ಲಿ ನಾವೇನು ಅವರ ಪರ್ಮಿಷನ್ ಇಲ್ಲದೇ ಕೈಗೊಳ್ಳುವಂತಹ ಸಂದರ್ಭಗಳನ್ನು ಮಾಡಲಿಕ್ಕೆ ಆಗುತ್ತಿಲ್ಲ. ಆದರೆ ನಾವು ಆ ಇಲಾಖೆಯ ಜೊತೆಗೆ ಸಂಪರ್ಕ ಮಾಡಿ ರುದ್ರೇಶ್ ಗೌಡರ ಅಪೇಕ್ಷೆಯಂತೆ ಏನಾದರೂ ಅವಕಾಶ ಕೊಟ್ಟಲ್ಲಿ ಅಲ್ಲಿ ಮುಂದಿನ ದಿನಗಳಲ್ಲಿ ಯಾವುದಾದರೂ ಒಂದು ಯಾತ್ರಿ ನಿವಾಸವನ್ನು ಮಾಡುವಂತಹ ಪ್ರಯತ್ನಗಳನ್ನು ನಾವು ಮಾಡುತ್ತೇವೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ :– ಪಕ್ಕದಲ್ಲಿ 10 ಎಕರೆ ಲ್ಯಾಂಡ್ ಇದೆ.

ಅಧ್ಯಕ್ಷರು :– ಆಯಿತು, ಅವರು ಉತ್ತರ ಹೇಳುವುದಕ್ಕೂ ಅವಕಾಶ ಕೊಡದಿದ್ದರೆ ನಾನು ಮುಂದಿನ ಪ್ರಶ್ನೆಯನ್ನು ಕರೆಯುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ :– ನಾನು ಹೇಳುತ್ತೇನೆ. ಖಂಡಿತವಾಗಿ ಮಾನ್ಯ ರುದ್ರೇಶ್ ಗೌಡರು ಒಂದು ಪ್ರಪೋಸಲ್ ಕೊಟ್ಟರೆ ಅದನ್ನು ಪ್ರವಾಸೋದ್ಯಮ ಇಲಾಖೆ ಪರಿಗಣಿಸುತ್ತದೆ ಮತ್ತು ಅದಕ್ಕೆ ಬೇಕಾದಂತಹ ಸೂಕ್ತ ಹಣಕಾಸು ವ್ಯವಸ್ಥೆಯನ್ನು ನಾವು ಕೊಡಲು ಸಿದ್ಧರಿದ್ದೇವೆ.

ಪ್ರಶ್ನೆ ಸಂಖ್ಯೆ 22(104) (ಶ್ರೀ ಸಿ.ಬಿ. ಸುರೇಶ್ ಬಾಬು)
(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಬೆಂಗಳೂರು ರೈಲು ಮಾರ್ಗದ ನಿರ್ಮಾಣ
23 : (167)

ಶ್ರೀ ರೇವಣ್ಣ ಹೆಚ್.ಡಿ. : – (ಹೊಳೆನರಸೀಪುರ)

ಅ) ಹಾಸನ – ಬೆಂಗಳೂರು ರೈಲ್ವೆ ಮಾರ್ಗದ ನಿರ್ಮಾಣ ಕಾರ್ಯಕ್ಕೆ ನೆಲಮಂಗಲ–ಸೋಲೂರು, ಕುಣಿಗಲ್ – ಯಡಿಯೂರು ಮತ್ತು ಹಿರೀಸಾವೆ – ಶ್ರಾವಣಬೆಳಗೊಳದ ಮಾರ್ಗದಲ್ಲಿ ಭೂಸ್ವಾಧೀನ ಪ್ರಕ್ರಿಯೆ ವಿಳಂಬ ನೀತಿಯಿಂದಾಗಿ ರೈಲ್ವೆ ಮಾರ್ಗದ ಕಾಮಗಾರಿಯು ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು;

ಇ) ಈ ಕಾಮಗಾರಿಗಳನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು?

ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು)

ಅ) 1. ಮೂಲತಃ ಈ ಯೋಜನೆಗೆ ಸಂಪೂರ್ಣ ಹಣವನ್ನು ರೈಲ್ವೆ ಮಂತ್ರಾಲಯವು ಭರಿಸುತ್ತಿತ್ತು. ಈ ಯೋಜನೆಗೆ ರೈಲ್ವೆ ಆಯವ್ಯಯದಲ್ಲಿ ಸಾಕಷ್ಟು ಹಣವಿಲ್ಲದ ಕಾರಣ ಹಾಗೂ ಭೂಸ್ವಾಧೀನ ವೆಚ್ಚವನ್ನು ಠೇವಣಿ ಮಾಡದ ಕಾರಣ ಈ ಕಾಮಗಾರಿಯು ಕುಂಠಿತವಾಗಿ ಸಾಗುತ್ತಿತ್ತು. ಈ ಕಾಮಗಾರಿಯನ್ನು ರಾಜ್ಯ ಸರ್ಕಾರವು ತ್ವರಿತಗತಿಯಲ್ಲಿ ಪೂರ್ಣಗೊಳಿಸುವ ಉದ್ದೇಶದಿಂದ ದಿನಾಂಕ 01.04.2010 ರಿಂದ ಜಾರಿಗೆ ಬರುವಂತೆ ಶೇಕಡ 50 ರಷ್ಟು ಹಣ ಭರಿಸಲು ಒಪ್ಪಿಕೊಂಡಿದೆ.

2. ಇದುವರೆಗೆ ಹಾಸನ–ಬೆಂಗಳೂರು ರೈಲ್ವೆ ಯೋಜನೆಗೆ ರೂ. 77.50 ಕೋಟಿಗಳನ್ನು ರೈಲ್ವೆಗೆ ಬಿಡುಗಡೆ ಮಾಡಲಾಗಿದೆ.

3. ಈ ಯೋಜನೆಗೆ 1815.09 ಎಕರೆ ಜಮೀನು ಅವಶ್ಯಕವಾಗಿ ಬೇಕಾಗಿದ್ದು, ಇದರಲ್ಲಿ ಈಗಾಗಲೇ 1728.78 ಎಕರೆ ಜಮೀನನ್ನು ರೈಲ್ವೆಗೆ ಹಸ್ತಾಂತರಿಸಲಾಗಿದೆ. ಉಳಿದ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ತದನಂತರ ಈ ಯೋಜನೆಗೆ ಮಾರ್ಗ ಮಧ್ಯದಲ್ಲಿನ ಕುಣಿಗಲ್ ಸ್ಟಡ್ ಫಾರಮ್ ವಿಭಾಗದಲ್ಲಿ ಮಾರ್ಗ ಬದಲಾವಣೆಯಾಗಿರುತ್ತದೆ. ಈ ಸಂದರ್ಭದಲ್ಲಿ ರಾಜ್ಯ ಸರ್ಕಾರವು ಕುಣಿಗಲ್ ಸ್ಟಡ್ ಫಾರಂ ವಿಭಾಗದ ಬರುವ ಮಾರ್ಗವನ್ನು ಬದಲಾಯಿಸಲು ರಾಜ್ಯ ಸರ್ಕಾರವು ಸಂಪೂರ್ಣ ಹಣವನ್ನು ಭರಿಸಲು ಒಪ್ಪಿಕೊಂಡಿದೆ. ರೈಲ್ವೆಗೆ ಅಗತ್ಯವಾಗಿರುವ ಜಮೀನಿನ ಸರ್ವೇ ನಂ. ವಿವರಗಳನ್ನು ರೈಲ್ವೆಯವರಿಂದ ನಿರೀಕ್ಷಿಸಲಾಗಿದೆ.

4. ಹಾಸನ–ಬೆಂಗಳೂರು ರೈಲು ಮಾರ್ಗದ ಕಾಮಗಾರಿಯು ಪ್ರಗತಿಯಲ್ಲಿದೆ.

ಇ) ರೈಲ್ವೆಯು ಈ ಯೋಜನೆಗಳನ್ನು ಪೂರ್ಣಗೊಳಿಸಲು ಈ ಕೆಳಕಂಡಂತೆ ತಾತ್ಕಾಲಿಕ ಕಾಲಮಿತಿಯನ್ನು ನಿಗಧಿಗೊಳಿಸಿದೆ :–

ರೈಲ್ವೆ ಮಾರ್ಗ ವಿಭಾಗ	ದೂರ	ಮುಕ್ತಾಯಗೊಳಿಸುವ ವರ್ಷ
ಶ್ರವಣಬೆಳಗೊಳ – ಹಿರಿಸಾವೆ	16 ಕಿ.ಮೀ.	2012–13
ಹಿರಿಸಾವೆ – ಬಿ.ಜಿ. ನಗರ	17 ಕಿ.ಮೀ.	2013–14
ಬಿ.ಜಿ. ನಗರ – ಯಡಿಯೂರು	15 ಕಿ.ಮೀ.	
ನೆಲಮಂಗಲ – ಸೋಲೂರು	16 ಕಿ.ಮೀ.	

ಸೋಲೂರು – ತಿಪ್ಪಸಂದ್ರ	16 ಕಿ.ಮೀ.	2014–15
ತಿಪ್ಪಸಂದ್ರ – ಕುಣಿಗಲ್	14 ಕಿ.ಮೀ.	
ಕುಣಿಗಲ್ – ಯಡಿಯೂರು	16 ಕಿ.ಮೀ.	

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದು ಏನೆಂದರೆ ಹಾಸನ–ಬೆಂಗಳೂರು ರೈಲ್ವೆ ಮಾರ್ಗ 1996–97ನೇ ಸಾಲಿನಲ್ಲಿ ಮಂಜೂರಾತಿ ಆಗಿದೆ. ಅದರ ಅಂದಾಜು ವೆಚ್ಚ 413 ಕೋಟಿ. Land Acquisitionಗೆ ಬೇಕಾದಂತಹ ಹಣವನ್ನು ಅವತ್ತೇ ಕೇಂದ್ರ ಸರ್ಕಾರದವರು ಕಟ್ಟಿದ್ದಾರೆ. ಸುಮಾರು 15 ವರ್ಷ ಆಗಿದೆ. ಹಾಸನ–ಬೆಂಗಳೂರು ರೈಲ್ವೆ ಮಾರ್ಗದ ಅಂದಾಜು ಯೋಜನೆಗೆ ಅನುಮತಿ ಕೊಟ್ಟು 15 ವರ್ಷ ಆಯಿತು. 15 ವರ್ಷದಲ್ಲಿ Land Acquisitionಗೆ ಕೇಂದ್ರ ಸರ್ಕಾರ ದುಡ್ಡನ್ನು ಕಟ್ಟಿದ್ದರೂ ಸಹ ಈ ರಾಜ್ಯದಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳಿಗೆ 15 ವರ್ಷ ಬೇಕಾ Land Acquisition ಮಾಡಲು? ಅದಕ್ಕೆ ಸಂಬಂಧಪಟ್ಟ ಹಾಗೆ ಈಗಾಗಲೇ 2009ರಲ್ಲಿ ಸನ್ಮಾನ್ಯ ಹಾಸನ ಲೋಕಸಭಾ ಸದಸ್ಯರು, ಮಾಜಿ ಪ್ರಧಾನ ಮಂತ್ರಿಗಳು ಶ್ರೀ ಸುಧಾಕರ್ ರಾವ್, ಚೀಫ್ ಸೆಕ್ರೆಟರಿ ಹಾಗೂ ಚೀಫ್ ಮಿನಿಸ್ಟರ್‌ಗೆ ಲೆಟರ್ ಬರೆದಿದ್ದಾರೆ. ಕಿಲೋಮೀಟರ್‌ವೈಸ್ ಹಾಕಿ ಏನೇನು ಇದೆ ಎನ್ನುವುದನ್ನು ರೈಲ್ವೆ ಇಲಾಖೆಯವರಿಗೆ ಕಳುಹಿಸಿಕೊಟ್ಟಿರುವಂತಹ ಲೆಟರ್ ಅನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು ಕೊಡುತ್ತೇನೆ. ಏನಾಗಿದೆ ಅಂದರೆ ತಮ್ಮ ಗಮನಕ್ಕೆ ತರುತ್ತೇನೆ. 412 ಕೋಟಿ ಇದ್ದಂತಹ ಅಂದಾಜು ವೆಚ್ಚ ಇವತ್ತು 942 ಕೋಟಿ ರೂಪಾಯಿ ಆಗುತ್ತಿದೆ. 15 ವರ್ಷ Land Acquisition ಕಾರಣಕ್ಕೋಸ್ಕರ ಸುಮಾರು 500 ಕೋಟಿ ರೂಪಾಯಿ ಇವತ್ತು ಎಕ್ಸೆಸ್ ಆಗುತ್ತಿದೆ. ಅದರಿಂದ 15 ವರ್ಷ ಆಗಿದೆ. ಎರಡು ಪೋರ್ಟಿಗೆ ಸಂಬಂಧ ಪಟ್ಟಿದ್ದು, ಒಂದು ಮಂಗಳೂರಿನಿಂದ ಬೆಂಗಳೂರು, ಬೆಂಗಳೂರಿನಿಂದ ಚೆನ್ನೈ ಪೋರ್ಟಿಗೆ ನೇರವಾಗಿ ಸಂಪರ್ಕ ಮಾಡುವಂತಹ ಒಂದು ರೈಲ್ವೆ ಮಾರ್ಗ ಆಗುತ್ತದೆ. ಉದಾಹರಣೆಗೆ ಹೇಳುವುದಾದರೆ ಹಾಸನ – ಶ್ರವಣಬೆಳಗೊಳ 42 ಕಿ.ಮಿ. ಇದೆ, ಆ ಕೆಲಸ ಕಂಪ್ಲೀಟ್ ಆಗಿದೆ. ಈ ವರ್ಷವೇನೋ ರೈಲ್ವೆ ಮಂತ್ರಿಗಳು ರೈಲು ಬಿಡುತ್ತೇವೆಂದು ಹೇಳಿದ್ದಾರೆ. ಅದೇನೋ ರೈಲು ಬಿಡುತ್ತಾರೋ ಅಥವಾ ಸುಮ್ಮನೇ ಖಾಲಿ ರೈಲು ಬಿಡುತ್ತಾರೋ ಗೊತ್ತಿಲ್ಲ. ಅದಾದ ಮೇಲೆ ನೆಲಮಂಗಲ – ಸೋಲೂರು 16 ಕಿ.ಮೀ ಕೆಲಸ ಕಂಪ್ಲೀಟ್ ಆಗಿದೆ. ಮತ್ತೆ ಅದೇ ರೀತಿ ಲ್ಯಾಂಡ್ ಅಕ್ವಿಸಿಷನ್ ಕೆಲಸ ಕುಣಿಗಲ್ ಮತ್ತು ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಉತ್ತರದಲ್ಲಿ

ಹೇಳಿದ್ದಾರೆ. ಶ್ರವಣಬೆಳಗೊಳ–ಹಿರಿಸಾವೆ 16 ಕಿ.ಮೀ. ಕೆಲಸ 2012–13ರಲ್ಲಿ ಮುಕ್ತಾಯವಾಗುತ್ತದೆ. ಹಿರಿಸಾವೆ–ಬಿ.ಜಿ. ನಗರ 17 ಕಿ.ಮೀ. ಕೆಲಸ, ಬಿ.ಜಿ. ನಗರ–ಯಡಿಯೂರು 15 ಕಿ.ಮೀ. ಕೆಲಸ ಹಾಗೂ ನೆಲಮಂಗಲ–ಸೋಲೂರು 16 ಕಿ.ಮೀ. ಕೆಲಸವು 2012–13ರಲ್ಲಿ ಮುಕ್ತಾಯವಾಗುತ್ತದೆ. ಸೋಲೂರು-ತಿಪ್ಪಸಂದ್ರ 16 ಕಿ.ಮೀ. ಕೆಲಸ, ತಿಪ್ಪಸಂದ್ರ–ಕುಣಿಗಲ್ 14 ಕಿ.ಮೀ. ಕೆಲಸ, ಕುಣಿಗಲ್–ಯಡಿಯೂರು 16 ಕಿ.ಮೀ. 2014–15ರಲ್ಲಿ ಮುಕ್ತಾಯ ಮಾಡುತ್ತೇವೆಂದು ಹೇಳಿದ್ದಾರೆ. ಇದೆಲ್ಲ ಯೋಜನೆಗಳು ಏತಕ್ಕೆ ಬೇಕು? ಕೇಂದ್ರ ಸರ್ಕಾರವನ್ನು ರಾಜ್ಯ ಸರ್ಕಾರ ಒತ್ತಾಯ ಮಾಡಬೇಕಾಗುತ್ತದೆ. ಲ್ಯಾಂಡ್ ಅಕ್ವಿಸಿಷನ್ ಮಾಡಲು ಕಂದಾಯ ಇಲಾಖೆಗೆ 15 ವರ್ಷ ಬೇಕಾ? ಇವರು ಲ್ಯಾಂಡ್ ಕೊಟ್ಟರೆ 1–2 ವರ್ಷದಲ್ಲಿ ಕಂಪ್ಲೀಟ್ ಮಾಡುತ್ತೇವೆಂದು ಕೇಂದ್ರ ಸರ್ಕಾರದವರು ಹೇಳುತ್ತಾರೆ. ನಮ್ಮ ಇಲಾಖೆ ಲ್ಯಾಂಡ್ ಅಕ್ವಿಸಿಷನ್ ಒಂದು ರೈಲ್ವೆ ಮಾರ್ಗಕ್ಕೆ 15 ವರ್ಷ ಲ್ಯಾಂಡ್ ಅಕ್ವಿಸಿಷನ್ ದುಡ್ಡು ಕೊಟ್ಟರೂ ಆಗುವುದಿಲ್ಲವೆಂದರೆ ಏನು ಅರ್ಥ? ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಯಾರು? ಈಗ 4(1) ಗೆ 30 ದಿವಸ ಬೇಕಾಗುತ್ತದೆ. 6(1) ಗೆ 30 ದಿವಸ ಬೇಕಾಗುತ್ತದೆ. ಇದೆಲ್ಲಾ ಸೇರಿ ಒಂದು ವರ್ಷ ಬೇಕಾಗುತ್ತದೆ. ಒಂದು ವರ್ಷದಲ್ಲಿ ಮಾಡುವಂತಹ ಕೆಲಸವನ್ನು ಮಾಡುವುದಕ್ಕೆ 15 ವರ್ಷ ತೆಗೆದುಕೊಳ್ಳುತ್ತಾರೆಂದರೆ ಅಧಿಕಾರಿಗಳು ಯಾವ ರೀತಿ ಇದ್ದಾರೆ, ಅವರ ಮೇಲೆ ಏನಾದರೂ ಕ್ರಮವನ್ನು ಮಾನ್ಯ ಮುಖ್ಯಮಂತ್ರಿಗಳು ತೆಗೆದುಕೊಳ್ಳುತ್ತಾರೆಯೇ? ಕೇಂದ್ರ ಸರ್ಕಾರ ಕೊಟ್ಟಂತಹ ಹಣ ಅದು. ಇಲ್ಲಿಯವರೆಗೆ ಲ್ಯಾಂಡ್ ಅಕ್ವಿಸಿಷನ್ ಮಾಡಿಲ್ಲ. ಇದಕ್ಕೆ ಕಾರಣವೇನು? ಯಾವ ಅಧಿಕಾರಿಗಳು ಇದಕ್ಕೆ ಕಾರಣಕರ್ತರು? ಅದನ್ನು ದಯಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು. ಈ ರೈಲ್ವೆ ಮಾರ್ಗವನ್ನು 2012–13 ರಲ್ಲಿಯಾದರೂ ಕಂಪ್ಲೀಟ್ ಮಾಡಿಸಲು ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರವನ್ನು ಒತ್ತಾಯಮಾಡಬೇಕೆಂದು ಕೇಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ :– ಮಾನ್ಯ ಅಧ್ಯಕ್ಷರೇ, ಈ ಕಾಮಗಾರಿಗಳಲ್ಲಿ ಸ್ವಲ್ಪ ಡಿಲೇ ಆಗಿರುವುದು ನಿಜ. ಆದರೆ ಇದಕ್ಕೆ ರಾಜ್ಯ ಸರ್ಕಾರ ಜವಾಬ್ದಾರಿಯಲ್ಲ. ಬಹುಶಃ ಇಡೀ ದೇಶದಲ್ಲಿಯೇ ಯಾವುದೇ ಒಂದು ರಾಜ್ಯ ಸರ್ಕಾರ ಅದರ ಯೋಜನಾ ವೆಚ್ಚದಲ್ಲಿ ಶೇ. 50 ರಷ್ಟು ಭರಿಸುವಂಥದ್ದು, 50 per cent of the cost sharing, ಅದನ್ನು ಮಾಡುತ್ತಾ ಇರುವಂತಹದ್ದು ಎಂದರೆ ಅದು ಕರ್ನಾಟಕ ಸರ್ಕಾರ. ಇದನ್ನು ನಾವೆಲ್ಲಾ ಗಮನಿಸಬೇಕಾಗಿದೆ. ಕಳೆದ 2–3 ವರ್ಷಗಳಿಂದ ನಮ್ಮ ಸರ್ಕಾರ ಬಂದ ಮೇಲೆ ಈ

ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿ ಅನುಷ್ಠಾನ ಮಾಡುವಂತಹ ಕೆಲಸ ಕಾರ್ಯಗಳನ್ನು ನಮ್ಮ ಸರ್ಕಾರ ಮಾಡಿದೆ. ನಾನು ಒಂದು ಮಾತು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ಒಂದು ಹಾಸನ – ಬೆಂಗಳೂರು ಯೋಜನೆಯು ಮಾನ್ಯ ರೇವಣ್ಣನವರಿಗೆ ಮಾತ್ರವಲ್ಲ ನನಗೂ ಕೂಡ ಮಂಗಳೂರಿಗೆ ಹೋಗಲು ಭಾರೀ ಹತ್ತಿರ ಆಗುತ್ತದೆ. ಈ ಒಂದು ಯೋಜನೆ ಆದಷ್ಟು ಬೇಗ ಅನುಷ್ಠಾನ ಆಗಬೇಕೆನ್ನುವುದು ನನ್ನ ಮನಸ್ಸಿನಲ್ಲಿಯೂ ಕೂಡ ಇದೆ. ಪ್ರಾಯಶಃ ನಮ್ಮ ಸರ್ಕಾರ ಬಂದ ಮೇಲೆ ಲ್ಯಾಂಡ್ ಅಕ್ವಿಸಿಷನ್ ಹಾಗೂ ಮತ್ತೊಂದರಲ್ಲಿ ನಾವು ಭಾರಿ ವೇಗವನ್ನು ಕೊಟ್ಟು ಇದನ್ನು ಮಾಡುವಂತಹ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. ಇದು ಸುಮಾರು 166 ಕಿ.ಮೀ. ಉದ್ದ ಇರುವಂತಹದ್ದು. 1995–96 ರಲ್ಲಿ ಇದರ ಮೂಲ ವೆಚ್ಚ ಸುಮಾರು 413 ಕೋಟಿ ರೂ. ಗಳಲ್ಲಿ ಇದನ್ನು ಕೈಗೆತ್ತಿಕೊಳ್ಳಬೇಕೆಂದು ಕೇಂದ್ರ ರೈಲ್ವೆ ಇಲಾಖೆ ನಿಶ್ಚಯಮಾಡಿತ್ತು. ಈ ರೈಲ್ವೆ ಇಲಾಖೆಯಲ್ಲಿ ಕೆಲಸದ ಕಾಮಗಾರಿ ಭಾರೀ ಸ್ಲೋ ಆಗಿ ಆಗುತ್ತಿತ್ತು. ಇದಕ್ಕೆ ಬೇಕಾಗಿ 01.04.2010 ರಲ್ಲಿ ಈ ಕಾಮಗಾರಿಗೆ ತಗಲುವಂತಹ ವೆಚ್ಚದಲ್ಲಿ ಶೇ. 50% ರಾಜ್ಯ ಸರ್ಕಾರ ಕೊಡುತ್ತದೆ. ಬಹಳ ವೇಗವಾಗಿ ಆಗಬೇಕು ಎನ್ನುವ ದೃಷ್ಟಿಯಿಂದ ರಾಜ್ಯ ಸರ್ಕಾರವೇ ಇದನ್ನು ಮಾಡುವಂತಹ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. ಈಗಾಗಲೇ ಚಿಕ್ಕಬಾಣಾವರ – ನೆಲಮಂಗಲ ಸುಮಾರು 14 ಕಿ.ಮೀ. ಮತ್ತು ಹಾಸನ – ಶ್ರವಣಬೆಳಗೊಳ ಸುಮಾರು 45 ಕಿ.ಮೀ. ಈಗಾಗಲೇ ಪೂರ್ಣಗೊಂಡಿದೆ. ಮಧ್ಯದಲ್ಲಿ ಬಂದಿರುವಂತಹದ್ದು ಕುಣಿಗಲ್ ಸ್ಟಡ್ ಫಾರಂನಲ್ಲಿ ಹಾದು ಹೋಗುತ್ತಿರುವಂತಹ ಮಾರ್ಗವನ್ನು ಬದಲಾಯಿಸಬೇಕು ಎಂದು ಹೇಳುವಂತಹದನ್ನು ಅಲ್ಲಿಯ ಸ್ಥಳೀಯ ಕನ್ನಡ ಪರ ಸಂಘಟನೆಗಳು, ಸ್ಥಳೀಯ ಶಾಸಕರೆಲ್ಲರ ಒತ್ತಾಯದ ಹಿನ್ನೆಲೆಯಲ್ಲಿ ಅದನ್ನು ಬದಲಾಯಿಸುವಂತಹ ಅನಿವಾರ್ಯತೆ ಬಂದು ಬಿಟ್ಟಿತು. ಅದಕ್ಕೆ ಬೇಕಾದಂತಹ ಭೂ ಸ್ವಾಧೀನತೆಯನ್ನು ಮಾಡಲಿಕ್ಕೆ ಕೂಡ ರಾಜ್ಯ ಸರ್ಕಾರ ತನ್ನೆಲ್ಲಾ ಕೆಲಸ ಕಾರ್ಯವನ್ನು ಮಾಡಿತು. ಸುಮಾರು ಈಗಾಗಲೇ ಇಡೀ ರಾಜ್ಯದಲ್ಲಿ 6–7 ತಿಂಗಳಲ್ಲಿ 1815 ಎಕರೆ ಭೂಮಿಯನ್ನು ರೈಲ್ವೆ ಇಲಾಖೆಗೆ ಹಸ್ತಾಂತರ ಮಾಡಿದ್ದೇವೆ. ಇದರಲ್ಲಿ ಈಗ ಇರುವಂತಹದ್ದು ಅಳಿಸಂದ್ರದಲ್ಲಿನ 13 ಎಕರೆ ಕೊಡಲಿಕ್ಕೆ ಬಾಕಿ ಇದೆ. ಅದು ಬೇರೆ ಬೇರೆ ಕಾರಣದಿಂದ ಇದೆ. ಒಂದು ವಾರದಲ್ಲಿ ಇದನ್ನು ಕೂಡ ಮುಗಿಸಿಕೊಡುವಂತಹ ಕೆಲಸ ಕಾರ್ಯಗಳನ್ನು ಮಾಡುತ್ತೇವೆ. ಎರಡನೇಯದಾಗಿ ಈಗಾಗಲೇ ಸ್ಟಡ್ ಫಾರಂ ನಲ್ಲಿ diversion ತೆಗೆದುಕೊಳ್ಳುವಂತಹದ್ದು. ಈಗ ಅದರಲ್ಲಿ ಒಂದು joint survey ನಡೆಯುತ್ತಿದೆ. ಸುಮಾರು 21 ಕೋಟಿ ರೂಪಾಯಿಗಳನ್ನು ಅದಕ್ಕೆ ತೆಗೆದಿರಿಸುವಂತಹ ಕೆಲಸ

ಕಾರ್ಯಗಳನ್ನು ಮಾಡಿದ್ದೇವೆ. ಸರ್ವೇ ನಂಬರ್ ವೈಸ್ ಅದನ್ನು joint survey ಮಾಡಿ ಅದನ್ನು ನಮಗೆ ಕೊಡುವಂತಹ ಕೆಲಸ ಕಾರ್ಯಗಳನ್ನು ಮಾಡುತ್ತೇವೆ. ಈಗಾಗಲೇ ನಾವು ಕಳೆದ ಆರು ತಿಂಗಳಲ್ಲಿ 383 ಕೋಟಿ ರೂ. ಗಳನ್ನು ರೈಲ್ವೆ ಇಲಾಖೆಗೆ ಬಿಡುಗಡೆ ಮಾಡುವಂಥ ಕೆಲಸ ಕಾರ್ಯಗಳನ್ನು ಕರ್ನಾಟಕ ರಾಜ್ಯದಿಂದ ಮಾಡಿದ್ದೇವೆ. ನಾವು ಕೂಡ ಈ ಕೆಲಸ ಬಹಳ ವೇಗವಾಗಿ ಆಗಬೇಕು ಎನ್ನುವ ದೃಷ್ಟಿಯಿಂದ ಬೇರೆ ಬೇರೆ ಹಂತಗಳಲ್ಲಿ ಮಾತನಾಡುತ್ತಿದ್ದೇವೆ. ನಮಗೆ ರೈಲ್ವೆಯಿಂದ ಬಂದಂಥ ಮಾಹಿತಿ ಪ್ರಕಾರ ಶ್ರವಣಬೆಳಗೊಳ – ಹಿರಿಸಾವೆಯ 16 ಕಿ.ಮೀ. 2012–13 ರಲ್ಲಿ ಕಂಪ್ಲೀಟ್ ಆಗುತ್ತದೆ. ಹಿರಿಸಾವೆಯಿಂದ ಬಿ.ಜಿ.ನಗರ 17 ಕಿ.ಮೀ., ಬಿ.ಜಿ. ನಗರದಿಂದ ಯಡಿಯೂರು, ಇದರ 15 ಕಿ.ಮೀ., ನೆಲಮಂಗಲದಿಂದ – ಸೋಲೂರು 16ಕಿ.ಮೀ.ನ ಕಾಮಗಾರಿಯನ್ನು 2013–14ರಲ್ಲಿ ಪೂರ್ಣಗೊಳಿಸುತ್ತೇವೆಂದು ನಮಗೆ ರೈಲ್ವೆ ಇಲಾಖೆಯವರು ಹೇಳಿದ್ದಾರೆ. ಅಲ್ಲಿಂದ ಸೋಲೂರು – ತಿಪ್ಪಸಂದ್ರ, ತಿಪ್ಪಸಂದ್ರ – ಕುಣಿಗಲ್ ಮತ್ತು ಕುಣಿಗಲ್ – ಯಡಿಯೂರು ಕಾಮಗಾರಿಗಳಲ್ಲಿ ಕ್ರಮವಾಗಿ 16, 14 ಮತ್ತೊಂದು 16 ಕಿ.ಮೀ. ನ ಕೆಲಸಗಳು ಸುಮಾರು 2014–2015 ರಲ್ಲಿ ಪೂರ್ತಿ ಮುಗಿಸುತ್ತೇವೆಂದು ರೈಲ್ವೆ ಇಲಾಖೆಯವರು ಹೇಳಿದ್ದಾರೆ. ನಾನು ಈ ಸಂದರ್ಭದಲ್ಲಿ ಮಾನ್ಯ ರೇವಣ್ಣನವರಿಗೆ ಭರವಸೆಯನ್ನು ಕೊಡುವುದಕ್ಕೆ ಇಚ್ಛೆಪಡುತ್ತೇನೆ. ರಾಜ್ಯ ಸರ್ಕಾರದಿಂದ ಭೂಮಿ ಕೊಡುವಂಥದ್ದರಲ್ಲಿ ಯಾವುದೇ ವಿಳಂಬವೂ ಈ ಸಂದರ್ಭದಲ್ಲಿ ಆಗುವುದಿಲ್ಲ. ಇನ್ನು ಒಂದು ವಾರ ಅಥವಾ ಹತ್ತು ದಿವಸಗಳಲ್ಲಿ ಈ ಕೆಲಸಗಳನ್ನು ಪೂರ್ಣಗೊಳಿಸುವಂಥದ್ದನ್ನು ಮಾಡುತ್ತೇವೆ. ಸ್ಟಡ್ ಫಾರ್ಮ್ ಡೀವಿಯೇಶನ್‌ನಲ್ಲಿರುವಂಥದ್ದರ ಬಗ್ಗೆ ಕೂಡ ಬಹಳ ವೇಗವಾಗಿ ಜಾಯಿಂಟ್ ಸರ್ವೆ ಕಾರ್ಯ ನಡೆಯುತ್ತಿದೆ. ಬಹುಶಃ ಅದು ಕೂಡ ಬಂದರೆ ಒಂದು ವಾರದಲ್ಲಿ ಅದನ್ನೂ ಕೂಡ ಬಿಟ್ಟುಕೊಡುವಂಥದ್ದನ್ನು ನಾವು ಮಾಡುತ್ತೇವೆ. ಲ್ಯಾಂಡ್ ಅಕ್ವಿಸಿಷನ್‌ಗೆ ಬೇಕಾದ ಹಣವನ್ನು ಕೊಡುವುದಕ್ಕೆ ಸರ್ಕಾರಕ್ಕೆ ಯಾವುದೇ ತೊಂದರೆಯಾಗುವುದಿಲ್ಲ. ಇತ್ತೀಚಿನ ದಿನಗಳಲ್ಲಿ ಇಂದಿನ ನಮ್ಮ ರೈಲ್ವೆ ಮಂತ್ರಿಗಳು ಬಂದಾಗ ರಾಜ್ಯದಲ್ಲಿರುವಂಥ ಎಲ್ಲಾ ಎಂ.ಪಿ.ಗಳು ಮತ್ತು ಇತರರು ಸೇರಿ ಕರ್ನಾಟಕ ರಾಜ್ಯದ ವಿವಿಧ on-going project ಗಳ ಬಗ್ಗೆ detailed discussion ಮಾಡಿದ್ದೇವೆ. ಅವರೂ ಕೂಡ ಇದರ ಬಗ್ಗೆ ಯೋಜನೆಗಳನ್ನು ತೆಗೆದುಕೊಳ್ಳುವಂಥ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. ರಾಜ್ಯ ಸರ್ಕಾರದಿಂದ ರಾಜ್ಯದ ರೈಲ್ವೆ ಯೋಜನೆಗಳ ಬಗ್ಗೆ ಅತ್ಯಂತ ವೇಗವಾಗಿ ಭೂಮಿ ಕೊಡುವಂಥ ಕೆಲಸವಿರಬಹುದು, ಶೇಕಡ 50ರಷ್ಟರ ಮೊತ್ತವನ್ನು

ಕೊಡುವಂಥದ್ದಿರಬಹುದು, ಇವುಗಳನ್ನು ಕೊಡುವುದಕ್ಕೆ ನಾವು ಬದ್ಧರಿದ್ದೇವೆ. ಈ ಬಾರಿಯ ಬಜೆಟ್‌ನಲ್ಲಿಯೂ ಕೂಡ ಸಾಕಷ್ಟು ಹಣವನ್ನು ಇಟ್ಟಿರುವುದನ್ನು ನೀವು ನೋಡಿದ್ದೀರಿ. ಆದಕಾರಣ ಆದಷ್ಟು ಬೇಗ ಈ ರೈಲ್ವೆ ಕಾಮಗಾರಿಗಳನ್ನು ಪೂರೈಸುವುದಕ್ಕೆ ನಮ್ಮ ಸಹಕಾರವಿದಯೆಂದು ಹೇಳಬಯಸುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಿಷ್ಟೆ. ನಾನು ತಮಗೆ ಒಂದು ಉದಾಹರಣೆಯನ್ನು ಕೊಡುತ್ತಿದ್ದೇನೆ. ದಿನಾಂಕ : 08–12–1998 ರಲ್ಲಿ 4(1) ನೋಟಿಫಿಕೇಶನ್ ಆಗಿದೆ. ಹಾಸನ – ಬೆಂಗಳೂರು ಮಧ್ಯದ 220 ಎಕರೆಯ ಒಂದು ಉದಾಹರಣೆಯನ್ನು ನಾನು ತಮಗೆ ಕೊಡುತ್ತಿದ್ದೇನೆ. 1998 ರಿಂದ 2011 ರವರೆಗೂ ಲ್ಯಾಂಡ್ ಅಕ್ವಿಸಿಷನ್‌ಗೆ ಟೈಂ ಬೇಕಾ ಸ್ವಾಮಿ? 4(1) ನೋಟಿಫಿಕೇಶನ್ ಆಗಿ 6(1) ನೋಟಿಫಿಕೇಶನ್ ಮಾಡಿ ಅವಾರ್ಡ್ ಮಾಡುವುದಕ್ಕೆ 13 ವರ್ಷಗಳು ಬೇಕಾ ಸ್ವಾಮಿ? ಯಾವ ರೀತಿ ಈ ಸರ್ಕಾರ ಕೆಲಸ ಮಾಡುತ್ತಿದೆ? ಅಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ? ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? 4(1) ನೋಟಿಫಿಕೇಶನ್ ಮಾಡಿ ತದನಂತರ 6(1) ನೋಟಿಫಿಕೇಶನ್ ಮಾಡುವುದಕ್ಕೆ 60 ದಿನಗಳು ಸಾಕು. 60 ದಿನಗಳಾದ ಮೇಲೆ ಅವಾರ್ಡ್ ಮಾಡುವುದಕ್ಕೆ ಒಂದು ಅರವತ್ತು ದಿನಗಳನ್ನು ತೆಗೆದುಕೊಳ್ಳಲಿ. ಎಲ್ಲವೂ ಸೇರಿ ಕೇವಲ ನಾಲ್ಕೈದು ತಿಂಗಳಲ್ಲಿ ಮಾಡಬಹುದಾದ ಕೆಲಸಕ್ಕೆ 13 ವರ್ಷಗಳ ಸಮಯವನ್ನು ತೆಗೆದುಕೊಂಡಿದ್ದೀರಲ್ಲ.? ಬೇಕಾದರೆ ತಮಗೆ ದಾಖಲೆ ಸಮೇತ ಮಾಹಿತಿ ಕೊಡುತ್ತೇನೆ. 1998 ರಲ್ಲಿ 4(1) ನೋಟಿಫಿಕೇಶನ್ ಆಗಿರುವುದು. ಇವತ್ತಿನವರೆವಿಗೂ ಅವಾರ್ಡ್ ಮಾಡುವುದಿಲ್ಲವೆಂದರೆ ಏನರ್ಥ?

ಶ್ರೀ ವೈ.ಎನ್. ರುದ್ರೇಶ್ ಗೌಡ :– ಮಾನ್ಯ ಅಧ್ಯಕ್ಷರೆ, ಇವರು ಇದೇ ರೀತಿ ಮುಂದುವರೆದರೆ ಇನ್ನೂ ಇಪ್ಪತ್ತು ವರ್ಷಗಳು ಬೇಕಾಗುತ್ತದೆ. ಮಾನ್ಯ ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ ಇದು ಮಂಜೂರಾಗಿರುವುದು. ಈಗಿನ ವೇಗದಲ್ಲಿಯೇ ಕಾಮಗಾರಿ ಕೆಲಸ ಹೋದರೆ ಬಹುಶಃ ಮಾನ್ಯ ರೇವಣ್ಣನವರು ಹೇಳಿದ ಹಾಗೆ 16 ವರ್ಷಕ್ಕೆ 45 ಕಿ.ಮೀ. ವರ್ಕ್ ಮುಗಿದರೆ, ಇನ್ನೂ ಉಳಿದ 110 ಕಿ.ಮೀ. ಕಾಮಗಾರಿ ಕೆಲಸ ಪೂರ್ಣಗೊಳ್ಳಬೇಕೆಂದರೆ ಇನ್ನು 20 ರಿಂದ 25 ವರ್ಷಗಳು ಬೇಕಾಗುತ್ತದೆ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದಂತೆ, 4(1) ಮಾಡಿ 6(1) ನೋಟಿಫಿಕೇಶನ್ ಹೊರಡಿಸಿ ಅವಾರ್ಡ್ ಮಾಡುವುದಕ್ಕೆ 20 ವರ್ಷಗಳು ಬೇಕೆ, ಸ್ವಾಮಿ? ಈ ರೀತಿಯ ವಿಳಂಬಕ್ಕೆ ಕಾರಣರಾದ ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಕ್ರಮ

ತೆಗೆದುಕೊಂಡರೆ ಅಧಿಕಾರಿಗಳಿಗೆ ಭಯ ಬರುತ್ತದೆ. ಕೇಂದ್ರ ಸರ್ಕಾರ ಕೊಟ್ಟಂಥ ಹಣವನ್ನು ಇವರು ಉಪಯೋಗ ಮಾಡಿಕೊಳ್ಳುವುದಕ್ಕೆ ಹೇಳುತ್ತಾರೆ. ಕೇಂದ್ರ ಸರ್ಕಾರದವರು ಪತ್ರ ಬರೆದು ಲ್ಯಾಂಡ್ ಅಕ್ವಿಸಿಷನ್ ಮಾಡಿಕೊಟ್ಟರೆ ನಾವು ಒಂದೇ ವರ್ಷದಲ್ಲಿ ಕಾಮಗಾರಿ ಕೆಲಸವನ್ನು ಕಂಪ್ಲೀಟ್ ಮಾಡಿಕೊಡುತ್ತೇವೆನ್ನುತ್ತಾರೆ. ಯಾರು ಈ ವಿಚಾರದಲ್ಲಿ ಏನು ತಪ್ಪನ್ನು ಮಾಡಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆಯೆ? ಜಿಲ್ಲಾಧಿಕಾರಿಗಳು ತಪ್ಪು ಮಾಡಿದ್ದರೆ ಅವರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ದಯಮಾಡಿ ತಿಳಿಸಿ, ಸ್ವಾಮಿ

ಶ್ರೀ ಡಿ.ವಿ. ಸದಾನಂದಗೌಡ :– ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದೆ. ಕಳೆದ ಬಾರಿ ನಮ್ಮ ಕೇಂದ್ರದ ರೈಲ್ವೆ ಸಚಿವರು ಬಂದ ಮೇಲೆ ನಾವು ಇದನ್ನು ವಿಮರ್ಶೆ ಮಾಡಿದ ಮೇಲೆ ಕೇವಲ ಆರು ತಿಂಗಳ ಅವಧಿಯಲ್ಲಿ 1815 ಎಕರೆ ಭೂಮಿಯನ್ನು ಈಗಾಗಲೇ ಕೊಟ್ಟಿದ್ದೇವೆ. ರೇವಣ್ಣನವರೆ, ನಿಮ್ಮ ಆಕ್ರೋಶಗಳು ನನಗೆ ಅರ್ಥವಾಗುತ್ತದೆ, ವರ್ಕ್ ವೇಗವಾಗಿ ನಡೆಯಲಿಲ್ಲ ಎಂದು ಹೇಳುವಂಥದ್ದು ನನಗೂ ಗೊತ್ತಾಗುತ್ತದೆ. ಆದುದರಿಂದ ನಾನು ಈಗ ತಮಗೆ ಹೇಳಬಯಸುತ್ತೇನೆ, ಸ್ವಲ್ಪ ಅವಾರ್ಡ್ ಡಿಫೆಕ್ಟ್ ಆಗಿದ್ದ ಕಾರಣ 13 ಎಕರೆಯದ್ದರ ಸಂಬಂಧ ಕೆಲಸ ಬಾಕಿ ಉಳಿದಿತ್ತು. ಈಗ ಅದು ಕ್ಲಿಯರ್ ಆಗಿದೆ. ಒಂದು ವಾರದಲ್ಲಿ ಅದನ್ನೂ ಮಾಡಿಸಿಕೊಡುತ್ತೇನೆ. ಇನ್ನು ಸ್ಟಡ್ ಫಾರ್ಮ್‌ನಲ್ಲಿರುವಂಥದ್ದರ ಬಗ್ಗೆ ಜಾಯಿಂಟ್ ಸರ್ವೇ ಕೆಲಸ ಕೂಡ ವೇಗವಾಗಿ ಆಗುತ್ತಿದೆ. ಪ್ರಾಯಶಃ ಕೆಲವೇ ದಿನಗಳಲ್ಲಿ ನಾವು ಇದನ್ನು ಕೂಡ ಫೈನಲೈಸ್ ಮಾಡಿ ಕೊಡುವಂಥ ಕೆಲಸ ಕಾರ್ಯಗಳನ್ನು ನಾವು ಮಾಡುತ್ತೇವೆ. ಇದರ ಜೊತೆಗೆ ಕೇಂದ್ರ ಸರ್ಕಾರದ ರೈಲ್ವೆ ಇಲಾಖೆ ಮೇಲೆ ಒತ್ತಡವನ್ನು ತಂದು ಆದಷ್ಟು ಶೀಘ್ರವಾಗಿ ನಿಗದಿತ ಸಮಯಕ್ಕೆ ಮುಂಚೆಯೇ ಈ ಕೆಲಸವಾಗಬೇಕು ಎಂದು ಹೇಳುವಂಥ ರೀತಿಯಲ್ಲಿ ಅವರಿಗೆ ಒತ್ತಡವನ್ನು ಹಾಕುವಂಥ ಕೆಲಸವನ್ನು ಮತ್ತು ರಾಜ್ಯ ಸರ್ಕಾರದ 50 ಪರ್ಸೆಂಟ್ ಕಾಸ್ಟ್‌ನ ದುಡ್ಡನ್ನು ತಕ್ಷಣ ರಿಲೀಸ್ ಮಾಡುವಂಥ ಕೆಲಸ ಕೂಡ ಆಗುತ್ತದೆ. ಇದರ ಜೊತೆಗೆ ಮಿಕ್ಕಂಥ ಎಲ್ಲ ಕೆಲಸ ಕಾರ್ಯಗಳನ್ನು ನಾವು ಮಾಡುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ :– ಮಾನ್ಯ ಅಧ್ಯಕ್ಷರೆ, ಇವತ್ತು ಶಿರಾಡಿ ಘಾಟ್ ಸೆಕ್ಷನ್‌ನಲ್ಲಿ ವೆಹಿಕಲ್‌ಗಳು ಓಡಾಡುವುದಕ್ಕೇ ಆಗುತ್ತಿಲ್ಲ. ಈಗ ಅಲ್ಲಿಂದ ಬರಬೇಕಾದರೆ ಎಷ್ಟು ಕಬ್ಬಿಣದ ಅದಿರಿನ ಲಾರಿಗಳು ಬರುತ್ತಿವೆ, ಗ್ಯಾಸ್ ಲಾರಿಗಳು ಬರುತ್ತಿವೆ, ಎಷ್ಟು ಅಪಘಾತಗಳು ಆಗುತ್ತಿವೆ ಎಂಬುದನ್ನು ನೋಡಬೇಕಾಗುತ್ತದೆ. ಅದಕ್ಕೋಸ್ಕರವೇ ನಾನು ಒಂದು ಪೋರ್ಟ್‌ನಿಂದ

ಇನ್ನೊಂದು ಪೋರ್ಟ್‌ಗೆ ನೇರವಾಗಿ ಸಂಪರ್ಕವಿರುವಂಥ ಈ ರೈಲ್ವೆ ಮಾರ್ಗವನ್ನು ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಬೇಕಾಗುತ್ತದೆ ಎಂದು ಹೇಳುತ್ತಿರುವುದು. ಈಗ ಇನ್ನೂ 90 ಎಕರೆ ಭೂಮಿ ಅಕ್ವೈರ್ ಆಗಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವ ಉತ್ತರದಲ್ಲಿದೆ. ಅದನ್ನು ಒಂದು ವಾರದಲ್ಲಿಯೋ, ಹದಿನೈದು ದಿವಸಗಳಲ್ಲಿಯೋ ಲ್ಯಾಂಡ್ ಅಕ್ವಿಸಿಷನ್ ಮಾಡಿಕೊಡಬೇಕು. ಏಕೆಂದರೆ ಈಗಾಗಲೇ ಹದಿನೈದು ವರ್ಷಗಳಾಗಿದೆ. ಲ್ಯಾಂಡ್ ಅಕ್ವಿಸಿಷನ್ ಮಾಡಿ ರೈಲ್ವೆ ಮಾರ್ಗ ಮಾಡಲು ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ಮಾಡಬೇಕಾಗುತ್ತದೆ. ಇದು 2014–2015 ರಲ್ಲಿ ಅಲ್ಲ, 2012–13ನೇ ಸಾಲಿನಲ್ಲಿಯೇ ಮಾಡಿಕೊಡಬೇಕಾಗುತ್ತದೆ. ಈಗಲೇ ಅವಕಾಶವಿದ್ದರೆ ಮಾಡುತ್ತಾರೆ. ಉದಾಹರಣೆಗೆ ಹೇಳುವುದಾದರೆ ಹಾಸನ – ಮೈಸೂರು ರೈಲ್ವೆ ಮಾರ್ಗದ 110 ಕಿ.ಮೀ. ಕಾಮಗಾರಿಯನ್ನು ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಾಗ ಒಂದೇ ವರ್ಷದಲ್ಲಿ ಮಾಡಿದರು. ಅದೇ ರೀತಿ ಈ ಮಾರ್ಗವನ್ನು ಬೇಗ ಮಾಡುವುದಕ್ಕೆ ಕೇಂದ್ರ ಸರ್ಕಾರಕ್ಕೆ ಏನು ತೊಂದರೆಯಾಗಿದೆ? ರಾಜ್ಯ ಸರ್ಕಾರ ಶೇಕಡ 50 ರಷ್ಟು ಹಣವನ್ನು ಕೊಡುತ್ತದೆ. ಹೀಗಿರುವಾಗ ಈ ಮಾರ್ಗದ ಕಾಮಗಾರಿ ಮಾಡುವುದಕ್ಕೆ ಹದಿನೈದು ವರ್ಷಗಳು ಬೇಕೆ? ಆದುದರಿಂದ ಈ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯವನ್ನು ಮಾಡಬೇಕೆಂದು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತಿದ್ದೇನೆ.

ಮಹಾನಗರ ಪಾಲಿಕೆಯನ್ನಾಗಿ ಮಾಡುವ ಬಗ್ಗೆ

24 : (110)

ಡಾ॥ ಸಾರ್ವಭೌಮ ಸಾತಗೌಡ ಬಗಲಿ (ಇಂಡಿ)

ಶ್ರೀ ಅಪ್ಪಾಸಾಹೇಬ ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ ನಗರ) ರವರ ಪರವಾಗಿ

ಅ) ನಗರಗಳನ್ನು ಮಹಾನಗರಪಾಲಿಕೆಯನ್ನಾಗಿ ಪರಿವರ್ತಿಸಲು ಅನುಸರಿಸುವ ಮಾನದಂಡಗಳೇನು?

ಆ) ರಾಜ್ಯದಲ್ಲಿ ಯಾವ ಯಾವ ನಗರಗಳನ್ನು ಮಹಾನಗರಪಾಲಿಕೆಯನ್ನಾಗಿ ಘೋಷಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆ?

ಇ) ಬಿಜಾಪುರ ನಗರವನ್ನು ಮಹಾನಗರಪಾಲಿಕೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಈ) ಹಾಗಿದ್ದಲ್ಲಿ, ಬಿಜಾಪುರ ನಗರವನ್ನು ಮಹಾನಗರಪಾಲಿಕೆಯನ್ನಾಗಿ ಎಂದಿನಿಂದ ಘೋಷಿಸಲಾಗುವುದು ;